ಬೆಳೆ ಸಮೀಕ್ಷೆ ಪ್ರಾರಂಭವಾಗುವ ಮುನ್ನ ಗ್ರಾಮ ಪಂಚಾಯಿತಿ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಸ್ಥಳೀಯ ಜನಪ್ರತಿನಿಧಿಗಳು, ರೈತ ಮುಖಂಡರು, ಮಾಧ್ಯಮ ಪ್ರತಿನಿಧಿಗಳನ್ನು ಒಳಗೊಂಡಂತೆ, ಕೃಷಿಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಮುಖ್ಯಸ್ಥರು ಪ್ರಚಾರ ಕಾರ್ಯಕ್ರಮದಲ್ಲಿ ಭಾಗವಹಿಸಲು ಕ್ರಮ ಕೈಗೊಳ್ಳುವುದು. ಅಪರ ಜಿಲ್ಲಾಧಿಕಾರಿಗಳನ್ನು ಜಿಲ್ಲಾ ಮಟ್ಟದ ಬೆಳೆ ಸಮೀಕ್ಷೆ ಉಸ್ತುವಾರಿ ಸಮಿತಿಯಲ್ಲಿ ನೋಡಲ್ ಅಧಿಕಾರಿಯಾಗಿ ನೇಮಿಸುವುದು ಹಾಗೂ ಕೃಷಿಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಮುಖ್ಯಸ್ಥರನ್ನು ಸಮಿತಿಯಲ್ಲಿ ಸದಸ್ಯರನ್ನಾಗಿ ನೇಮಿಸುವುದು. ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿಗಳು ನಡೆಸುವ ಮಾಸಿಕ ಪರಿಶೀಲನಾ ಸಭೆಯಲ್ಲಿ ಬೆಳೆ ಸಮೀಕ್ಷೆ ವಿಷಯವನ್ನು ಕಡ್ಡಾಯ ಕಾರ್ಯಸೂಚಿಯಾಗಿಸುವುದು. ರಾಜ್ಯ ಮಟ್ಟದ ಬೆಳೆ ಸಮೀಕ್ಷೆ ತಂಡ (CSWG/PMU) ಹಾಗೂ ಬೆಳೆ ಸಮೀಕ್ಷೆ ಸಹಾಯವಾಣಿ (Help Desk) ಈ ಎರಡೂ ತಂಡಗಳು ಒಂದೇ ಕಛೇರಿಯಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಅಧೀನದಲ್ಲಿ ಕಾರ್ಯನಿರ್ವಹಿಸುವುದು ಸೂಕ್ತ ಎಂಬುದಾಗಿ ಸೂಚಿಸಿರುತ್ತಾರೆ.

ಮಾನ್ಯ ಕೃಷಿ ಸಚಿವರು ಸೂಚಿಸಿರುವ ಅಂಶಗಳಿಗೆ ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆಯೊಂದಿಗೆ 2020–21ನೇ ಸಾಲಿನಲ್ಲಿ ಬೆಳೆ ಸಮೀಕ್ಷೆ ಕಾರ್ಯ ಕೈಗೊಳ್ಳಲು ಕೆಳಕಂಡಂತೆ ಸರ್ಕಾರಿ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 83 ಕೃಕೈಲ 2020, ದಿ:07.08.2020, ಬೆಂಗಳೂರು.**

2020–21ನೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ) ರವರ ಮಾರ್ಗದರ್ಶಿತ ಮೊಬೈಲ್ ಆ್ಯಪ್ ಬಳಸಿಕೊಂಡು (ಅ) ರೈತರೇ ಸ್ವತಂತ್ರವಾಗಿ (ಆ) ಖಾಸಗಿ ನಿವಾಸಿಗಳ ಸಹಾಯದೊಂದಿಗೆ ರೈತರು, ಮತ್ತು (ಇ) ಒಂದು ವೇಳೆ (ಅ) ಮತ್ತು (ಆ) ಸಾಧ್ಯವಾಗದಿದ್ದಲ್ಲಿ ಖಾಸಗಿ ನಿವಾಸಿಗಳು ಮತ್ತು ಸರ್ಕಾರದ ಸಿಬ್ಬಂದಿಗಳನ್ನು ಬಳಸಿಕೊಂಡು ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳ ಬೆಳೆ ಸಮೀಕ್ಷೆಯನ್ನು ಕೈಗೊಳ್ಳಲು ಸರ್ಕಾರದ ಅನುಮತಿಯನ್ನು ನೀಡಿದೆ.

2. ಬೆಳೆ ಸಮೀಕ್ಷೆ ಕೈಗೊಳ್ಳುವ ಸಮೀಕ್ಷಕರಿಗೆ ಈ ಕೆಳಕಂಡಂತೆ ಗೌರವಧನ ಪಾವತಿಸಲು ಸಹ ಅನುಮೋದನೆ ನೀಡಿದೆ.

- ಖಾಸಗಿ ನಿವಾಸಿಗಳು ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಚಟುವಟಿಕೆಗಳ ಜೊತೆಗೆ ಬೆಳೆ ಸಮೀಕ್ಷೆ ಯೋಜನೆಯ ಪ್ರಚಾರ, ರೈತರ ಹಕ್ಕು ಮತ್ತು ಜವಾಬ್ದಾರಿ ಹಾಗೂ ಬೆಳೆ ಸಮೀಕ್ಷೆಯ ಮಾಹಿತಿ/ದತ್ತಾಂಶದ ಉಪಯೋಗಗಳ ಕುರಿತು ಅವರಿಗೆ ಹಂಚಿಕೆಯಾದ ಗ್ರಾಮದಲ್ಲಿ ಉಸ್ತುವಾರಿ ವಹಿಸತಕ್ಕದ್ದು.
- ರೈತರು ಖಾಸಗಿ ನಿವಾಸಿಗಳ ಸಹಾಯದೊಂದಿಗೆ ಬೆಳೆ ಸಮೀಕ್ಷೆ ಆಪ್ ನಲ್ಲಿ ಅಪ್‌ಲೋಡ್ ಮಾಡಿದ ಪ್ರತಿ ತಾಕಿನ ಛಾಯಾಚಿತ್ರ ಮತ್ತು ಬೆಳೆ ವಿವರಗಳಿಗೆ ಹಾಗೂ ಖಾಸಗಿ ನಿವಾಸಿಗಳೇ ಸ್ವತಃ ಬೆಳೆ ಸಮೀಕ್ಷೆ ಮಾಡಿ ಬೆಳೆ ಸಮೀಕ್ಷೆ ಆಪ್ ನಲ್ಲಿ ಅಪ್‌ಲೋಡ್ ಮಾಡಿದ ಪ್ರತಿ ತಾಕಿನ ಛಾಯಾಚಿತ್ರ ಮತ್ತು ಬೆಳೆ ವಿವರಗಳಿಗೆ ಸಂಬಂಧಿಸಿದಂತೆ ಮೊದಲ ಬೆಳೆಗೆ ರೂ. 10/– ಗಳನ್ನು ಮತ್ತು ತಾಕಿನಲ್ಲಿ ಇರುವ ಪ್ರತಿ ಹೆಚ್ಚುವರಿ ಬೆಳೆಯ ಛಾಯಾಚಿತ್ರವನ್ನು ತೆಗೆದು ಅಪ್‌ಲೋಡ್ ಮಾಡಲು ಪ್ರತಿ ಹೆಚ್ಚುವರಿ ಬೆಳೆಗೆ 5/–ರಂತೆ ಗರಿಷ್ಠ ರೂ.20/– ರ ಮಿತಿಯಲ್ಲಿ ಖಾಸಗಿ ನಿವಾಸಿಗಳಿಗೆ ಪಾವತಿಸುವುದು.

## ಅನುಬಂಧ–4

## ಅನುಷ್ಠಾನದ ವೇಳಾ ಪಟ್ಟಿ

| ಚಟುವಟಿಕೆಗಳು | ಸಂಸ್ಥೆ | ಸಮಯಸೂಚಿ |
|---|---|---|
| ಬೆಳೆ ವಿವರಗಳನ್ನು ಹಾಗೂ ಆಧಾರ್ ಮಾಹಿತಿಗಳನ್ನು ಅಪ್ ಲೋಡ್ ಮಾಡಲು ರೈತರು ಬಳಸಬೇಕಾದ ಮೊಬೈಲ್ ಆ್ಯಪ್ ಮತ್ತು ತಂತ್ರಾಂಶದ ಅಭಿವೃದ್ಧಿ | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) | 07.08.2020 |
| ಖಾಸಗಿ ನಿವಾಸಿಗಳ ನೇಮಕಾತಿ ಮತ್ತು ಐಡಿಸಿ ಪ್ರಾರಂಭಿಸುವುದು | ತಾಲ್ಲೂಕು ಮಟ್ಟದ ಸಮಿತಿ | 10.08.2020 |
| ಸರ್ಕಾರಿ ಅಧಿಕಾರಿಗಳಿಗೆ ಗ್ರಾಮಗಳ ಹಂಚಿಕೆ | ತಾಲ್ಲೂಕು ಮಟ್ಟದ ಸಮಿತಿ | 10.08.2020 |
| ಮಾಸ್ಟರ್ ತರಬೇತಿದಾರರಿಗೆ ತರಬೇತಿ | ಕೃಷಿ ಇಲಾಖೆ | 11.08.2020 |
| ಖಾಸಗಿ ನಿವಾಸಿಗಳಿಗೆ ಸಾಟ್ ಕಾಮ್ ಮೂಲಕ ತರಬೇತಿ | ಕೃಷಿ ಇಲಾಖೆ | 12.08.2020 |
| ಮಾಸ್ಟರ್ ತರಬೇತುದಾರರಿಂದ ಖಾಸಗಿ ನಿವಾಸಿಗಳಿಗೆ ಎರಡನೇ ತರಬೇತಿ | ಜಿಲ್ಲಾ ಆಡಳಿತ | 13.08.2020 |
| ರೈತರಿಂದ ಬೆಳೆ ಸಮೀಕ್ಷೆ ಚಟುವಟಿಕೆಯ ಪ್ರಾರಂಭ | ಜಿಲ್ಲಾ ಆಡಳಿತ ಮತ್ತು ರೈತರು | 10.08.2020 |
| ರೈತರಿಗೆ ಬೆಳೆ ಸಂಬಂಧಿತ ವಿವರಗಳನ್ನು ಅಪ್ಲೋಡ್ ಮಾಡಲು ಕೊನೆಯ ದಿನಾಂಕ | ರೈತರು | ಮುಂಗಾರು ಹಂಗಾಮಿಗೆ 10.08.2020 ರಿಂದ 24.08.2020 ಹಿಂಗಾರು ಹಂಗಾಮಿಗೆ 01.12.2020 ರಿಂದ 15.12.2020 ಬೇಸಿಗೆ ಹಂಗಾಮಿಗೆ 01.03.2021 ರಿಂದ 15.03.2021 |

